೩–೦೦ ಪಿ. ಎಂ.

ಶ್ರೀ ಕೆ.ಹೆಚ್. ಪಾಟೀಲ್.–ಮಾನ್ಯ ಅಧ್ಯಕ್ಷರೆ, ೧೦ ಲಕ್ಷ ರೂಪಾಯಿಗಳನ್ನು ಕೂಡಿಸಿ ಈಗಾಗಲೇ ಒಂದೂವರೆ ವರ್ಷ ಆಯಿತು. ಹಿಂದಿನ ಸರ್ಕಾರ ಅಮೌಂಟ್ ರಿಲೀಸ್ ಮಾಡಿರಲಿಲ್ಲ. ಅದು ಸರ್ಕಾರದ ತಪ್ಪು. ಅದು ಈ ಸರ್ಕಾರದಿಂದ ಪರಿಹಾರವಾಗಿದೆ. ಫೈನಾನ್ಸ್ ಮಿನಿಸ್ಟರ್ ಮೊನ್ನೆ ಎಲ್ಲ ಅಧಿಕಾರಿಗಳನ್ನು ಕರೆದು ತೀರ್ಮಾನ ತೆಗೆದುಕೊಂಡಿರುವುದರಿಂದ ಈ ವಿಷಯವನ್ನು ಮತ್ತೆ ಪ್ರಸ್ತಾಪಿಸುವುದಕ್ಕೆ ನಾನು ಇಚ್ಛಿಪಡುವುದಿಲ್ಲ. ೩೦ನೇ ತಾರೀಖಿನೊಳಗೆ ಹಣ ರಿಲೀಸ್ ಆಗುತ್ತದೆಂದು ಮಂತ್ರಿಗಳು ಆಶ್ವಾಸನೆ ಕೊಟ್ಟಿರು. ಆದನ್ನು ನಂಬಿ ನಾನು ಉಪ ಪ್ರಶ್ನೆ ಕೇಳುವುದಿಲ್ಲ.

ಪ್ರಶ್ನೆ ಸಂಖ್ಯೆ : ೧೨೪ (೩೪೭)

ಸದಸ್ಯರು ಹಾಜರಿರಲಿಲ್ಲ.

ಮಾಗಡಿ ತಾಲ್ಲೂಕಿನ ಕುದೂರು ಗ್ರಾಮದಲ್ಲಿ ಆಸ್ಪತ್ರೆ

೨೦೩. ಶ್ರೀ ಹೆಚ್. ಎಂ. ರೇವಣ್ಣ (ಮಾಗಡಿ).–ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಾಗಡಿ ತಾಲ್ಲೂಕಿನ ಕುದೂರು ಗ್ರಾಮದಲ್ಲಿ ೧೦ ಹಾಸಿಗೆಗಳ ಹೆರಿಗೆ ಆಸ್ಪತ್ರೆಯನ್ನು ಪ್ರಾರಂಭಿಸಲು ಮನವಿಗಳೇನಾದರೂ ಬಂದಿದೆಯೇ ?

ಆ) ಈ ಆಸ್ಪತ್ರೆಯನ್ನು ಪ್ರಾರಂಭಿಸಲು ಬೆಂಗಳೂರಿನ ಶ್ರೀ ಅಶೋಕ ಜ್ಯೂಯಲರ್ಸ್ ಮಾಲೀಕರಾದ ಶ್ರೀ ಕುದೂರು ಕೆ. ಎ. ಸತ್ಯನಾರಾಯಣ ಶೆಟ್ಟಿ ಎಂಬುವರು ಸರ್ಕಾರಕ್ಕೆ ಒಂದು ಲಕ್ಷದ ದೇಣಿಗೆಯನ್ನು ಕೊಡಲು ಒಪ್ಪಿರುವುದು ನಿಜವೇ ?

ಇ) ದಾನಿಗಳು ಮುಂದೆ ಬಂದು ೭೦ಸಾವಿರ ರೂ.ಗಳ ದೇಣಿಗೆಯನ್ನು ಸರ್ಕಾರಕ್ಕೆ ಕೊಟ್ಟಿದ್ದರೂ ಆಸ್ಪತ್ರೆ ಕೆಲಸವನ್ನು ಪ್ರಾರಂಭಿಸದಿರಲು ಕಾರಣಗಳೇನು ?

ಈ) ಈಗಲಾದರೂ ಈ ಆಸ್ಪತ್ರೆ ಕಟ್ಟಲು ಮಂಜೂರಾತಿ ನೀಡಿ ಕಟ್ಟಡ ಕೆಲಸ ಪ್ರಾರಂಭ ಮಾಡಲು ಕ್ರಮ ಕೈಗೊಳ್ಳಲಾಗುವುದೇ ?

ಶ್ರೀಮತಿ ಮನೋರಮಾ ಮಧ್ವರಾಜ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವೆಯರು).—

ಅ) ಬಂದಿದೆ

ಆ) ಹೌದು

ಇ) ದಾನಿಗಳು ೧.೦೨ ಲಕ್ಷ ರೂ.ಗಳ ದೇಣಿಗೆಯನ್ನು ನೀಡಲು ಮುಂದೆ ಬಂದಿದ್ದರೂ, ೧೦ ಹಾಸಿಗೆಗಳಿರುವ ಒಂದು ಹೆರಿಗೆ ಆಸ್ಪತ್ರೆಯನ್ನು ಸ್ಥಾಪನೆ ಮಾಡಲು ಕಟ್ಟಡಕ್ಕೆ ಸುಮಾರು ೩.೦೦ ಲಕ್ಷ ರೂ.ಗಳ ವೆಚ್ಚ ಬರುತ್ತದೆ, ಅಲ್ಲದೆ ಸಿಬ್ಬಂದಿ ಸಂಬಳ ಸಾರಿಗೆ ಬಗ್ಗೆ ಆವರ್ತ ವೆಚ್ಚ ಪ್ರತಿ ವರ್ಷಕ್ಕೆ ೨.೦೦ ಲಕ್ಷ ರೂ.ಗಳು ಬರುತ್ತದೆ. ಈ ವೆಚ್ಚವನ್ನು ಭರಿಸಲು ಜಿಲ್ಲಾ ಪರಿಷತ್ತು ಆಯವ್ಯಯದಲ್ಲಿ ವ್ಯವಸ್ಥೆ ಮಾಡಬೇಕಾಗುತ್ತದೆ. ಪ್ರಸಕ್ತ ವರ್ಷದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲಾ ಪರಿಷತ್ತು ಈ ವೆಚ್ಚವನ್ನು ಭರಿಸಲು ಸೂಕ್ತ ಹಣಕಾಸಿನ ವ್ಯವಸ್ಥೆ ಮಾಡಿಲ್ಲವಾದ್ದರಿಂದ ಇಲ್ಲಿಯವರೆವಿಗೂ ಈ ಆಸ್ಪತ್ರೆ ತೆರೆಯಲು ಸರ್ಕಾರ ಮಂಜೂರಾತಿ ನೀಡಿಲ್ಲ. ಈ ವಿಷಯ ಕುರಿತು ಬೆಂಗಳೂರು ಗ್ರಾಮಾಂತರ ಜಿಲ್ಲಾ ಪರಿಷತ್‌ನೊಂದಿಗೆ ಸಮಾಲೋಚನೆ ನಡೆಸಿ ಹಣಕಾಸಿನ ವ್ಯವಸ್ಥೆಯಾದ ಮೇಲೆ ಮಂಜೂರಾತಿ ನೀಡಲಾಗುವುದು.

ಈ) (ಇ)ನಲ್ಲಿ ಪ್ರಸ್ತಾಪಿಸಿರುವ ಹಣಕಾಸಿನ ವ್ಯವಸ್ಥೆಯಾದ ಕೂಡಲೇ ಮಂಜೂರಾತಿ ನೀಡಲು ಪರಿಶೀಲಿಸಲಾಗುವುದು.

ಶ್ರೀ ಹೆಚ್. ಎಂ. ರೇವಣ್ಣ.—ಮಾನ್ಯ ಸಭಾಧ್ಯಕ್ಷರೆ, ಮಾಗಡಿ ತಾಲ್ಲೂಕಿನ ಕುದೂರು ಗ್ರಾಮದಲ್ಲಿ ೧೦ ಹಾಸಿಗೆಗಳುಳ್ಳ ಹೆರಿಗೆ ಆಸ್ಪತ್ರೆಯನ್ನು ಪ್ರಾರಂಭಿಸಲು ಶ್ರೀ ಕೆ. ಎ. ಸತ್ಯನಾರಾಯಣ ಶೆಟ್ಟಿ ಅವರು ಒಂದು ಲಕ್ಷ ರೂಪಾಯಿ ದೇಣಿಗೆಯನ್ನು ೧೯೮೬ರಲ್ಲಿ ಕೊಟ್ಟಿದ್ದಾರೆ. ಈಗ ಆ ಕಟ್ಟಡ ಕಟ್ಟಿದ್ದೇಕಾದರೆ ೩ ಲಕ್ಷ ರೂಪಾಯಿ ಆಗುತ್ತದೆಂದು ಹೇಳುತ್ತಾರೆ. ಜಿಲ್ಲಾ ಪರಿಷತ್ತಿನವರು ಮಿಕ್ಕ ಹಣವನ್ನು ಕೊಡಲು ಒಪ್ಪಿಗೆ ಕೊಟ್ಟಿರುವುದು ಸಚಿವರಿಗೆ ತಿಳಿದಿದೆಯೇ

ಶ್ರೀಮತಿ ಮನೋರಮಾ ಮಧ್ವರಾಜ್.—ಪ್ರಸಕ್ತ ವರ್ಷದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲಾ ಪರಿಷತ್ತು ಈ ವೆಚ್ಚ ಭರಿಸಲು ಸೂಕ್ತ ವ್ಯವಸ್ಥೆ ಮಾಡಿಲ್ಲ. ಆದ್ದರಿಂದ ಇದಕ್ಕೆ ಸರ್ಕಾರ ಮಂಜೂರಾತಿ ನೀಡಿಲ್ಲ, ಆವರು ಶಿಫಾರಸ್ಸು ಮಾಡಿದರೆ ನಾವು ಖಂಡಿತ ಮಂಜೂರಾತಿ ಮಾಡುತ್ತೇವೆ.

ಶ್ರೀ ಹೆಚ್. ಎಂ. ರೇವಣ್ಣ.—ಜಿಲ್ಲಾ ಪರಿಷತ್‌ನವರು ಒಪ್ಪಿಗೆ ಕೊಟ್ಟಿದ್ದಾರೆ. ಆದ್ದರಿಂದ ಆಸ್ಪತ್ರೆಯನ್ನು ಕಟ್ಟಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀಮತಿ ಮನೋರಮಾ ಮಧ್ವರಾಜ್. —ಮಾಡುತ್ತೇವೆ.

ಎಂ. ಬಿ. ಬಿ. ಎಸ್. ವ್ಯಾಸಂಗಕ್ಕೆ ಪ್ರವೇಶ

೩೯೯. ಶ್ರೀ ರಮಾನಾಥ ರೈ (ಬಂಟ್ವಾಳ).—ಮಾನ್ಯ ಆರೋಗ್ಯ, ಕುಟುಂಬ ಕಲ್ಯಾಣ ಹಾಗೂ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೭೫-೭೬ರಲ್ಲಿ ಜಾರಿಯಲ್ಲಿದ್ದ ಬಿ. ಎ. ಎಂ. ಎಸ್. (ಭಾರತೀಯ ಆಯುರ್ವೇದಿಕ್ ಮೆಡಿಕಲ್ ಸೈನ್ಸ್)ನಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಎಂ ಬಿ ಬಿ ಎಸ್ ಪದವಿ ಪ್ರವೇಶ ಅವಕಾಶ ಕಲ್ಪಿಸಿಕೊಡುವ ಯೋಜನೆ ಈಗಲೂ ಜಾರಿಯಲ್ಲಿದೆಯೇ ?

ಆ) ಇಲ್ಲವಾದರೆ ಆ ಯೋಜನೆಯನ್ನು ಪುನಃ ಆಳವಡಿಸಲಾಗುವುದೇ ?

ಶ್ರೀಮತಿ ಮನೋರಮಾ ಮಧ್ವರಾಜ್ (ಆರೋಗ್ಯ, ಕುಟುಂಬ ಕಲ್ಯಾಣ ಹಾಗೂ ಸಹಕಾರ ಮಂತ್ರಿಗಳು).—

ಅ) ಇಲ್ಲ

ಆ) ಪುನಃ ಆಳವಡಿಸುವ ಯೋಜನೆ ಇಲ್ಲ

ಶ್ರೀ ರಮಾನಾಥ ರೈ.—ಮಾನ್ಯ ಅಧ್ಯಕ್ಷರೆ, ಹಿಂದೆ ಬಿ.ಎ.ಎಂ.ಎಸ್. ವಿದ್ಯಾರ್ಥಿಗಳು ಗರಿಷ್ಠ ಅಂಕಗಳನ್ನು ಗಳಿಸಿದರೆ ಎಂ.ಬಿ.ಬಿ.ಎಸ್.ಗೆ ಸೇರುವುದಕ್ಕೆ ೧೯೭೫-೭೬ನೇ ಇಸವಿಯಲ್ಲಿ ಅವಕಾಶ ಇತ್ತು. ಅದನ್ನು ಏತಕ್ಕೆ ರದ್ದು ಮಾಡಿದ್ದಾರೆ? ಆದರಿಂದ ಏನಾದರೂ ತೊಂದರೆ ಇದೆಯೆ ? ಇಲ್ಲದಿದ್ದರೆ ಹಿಂದೆ ಇದ್ದಂತೆ ಮುಂದುವರೆಸಲು ಸಾಧ್ಯವಿದೆಯೇ ?

ಶ್ರೀಮತಿ ಮನೋರಮಾ ಮಧ್ವರಾಜ್.—ಮಾನ್ಯ ಸಭಾಧ್ಯಕ್ಷರೆ. ನಮ್ಮ ದೇಶದಲ್ಲಿ ಈಗ ಭಾರತೀಯ ವೈದ್ಯ ಪದ್ಧತಿಯು ಬಹಳಷ್ಟು ಜನಪ್ರಿಯವಾಗಿರುವುದರಿಂದ ಮತ್ತೆ ಆಯುರ್ವೇದದಲ್ಲಿ ಕೂಡ ಪಿ.ಜಿ. ಕೋರ್ಸ್ ಇರುವುದರಿಂದ ಮತ್ತೆ ಎಂ.ಬಿ.ಬಿ.ಎಸ್. ಮಾಡುವ ಪ್ರಮೇಯ ಇರುವುದಿಲ್ಲ. ಭಾರತೀಯ ವೈದ್ಯ ಪದ್ಧತಿಯಲ್ಲಿ ಹೆಚ್ಚಿನ ವ್ಯಾಸಂಗ ಮಾಡುವ ಅವಕಾಶ ಇರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಪ್ರಶ್ನೆ ಸಂಖ್ಯೆ : ೧೨೭ (೩೧೬)

ಸದಸ್ಯರು ಹಾಜರಿರಲಿಲ್ಲ

ಪ್ರಶ್ನೆ ಸಂಖ್ಯೆ : ೧೨೮ (೧೪೧)

ಸದಸ್ಯರು ಹಾಜರಿರಲಿಲ್ಲ

ಪ್ರಶ್ನೆ ಸಂಖ್ಯೆ : ೧೧೧ (೩೭೩)

ಸಹಕಾರ ಸಂಘಗಳ ನೌಕರರನ್ನು ಸರಕಾರಿ ನೌಕರರೆಂದು ಪರಿಗಣಿಸುವುದು

೩೭೩. ಶ್ರೀ ಪಿ. ಸಿ. ಸಿದ್ದನಗೌಡರ್ (ಕಲಘಟಗಿ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ ಸಹಕಾರಿ ಸಂಘಗಳ ನೌಕರರನ್ನು ಸರ್ಕಾರಿ ನೌಕರರೆಂದು ಪರಿಗಣಿಸುವ ವಿಚಾರ ಯಾವ ಹಂತದಲ್ಲಿದೆ ?

ಆ) ಗ್ರಾಮ ಸೇವಾ ಸಹಕಾರ ಸಂಘಗಳ ನೌಕರರು ಈ ಹಿಂದೆ ಉಪವಾಸ ಸತ್ಯಾಗ್ರಹದಲ್ಲಿದ್ದಾಗ ಸರ್ಕಾರದವರು ನೀಡಿದ ಭರವಸೆಗಳೇನು ? ಹಾಗೂ ಕೈಗೊಂಡ ನಿರ್ಣಯವೇನು ? ಈಗ ಯಾವ ಹಂತದಲ್ಲಿದೆ ?